# ಒಳಗೂ ಹೊರಗೂ ತುರುಸಿನ 'ಆಟ'



ಬೇಸಿಗೆಯ ಬಿಸಿಲು ಜ್ವರದಂತೆ ಏರುತ್ತಿದೆ. ಆದರೆ, ಅದಕ್ಕೂ ತೀವ್ರವಾಗಿ 'ಅಂದರ್ ಬಾಹರ್' ಚಿತ್ರದ ಬಗೆಗಿನ ನಿರೀಕ್ಷೆಗಳು ಹೆಚ್ಚುತ್ತಿವೆ. ಶಿವರಾಜ್‌ಕುಮಾರ್ ಅಭಿನಯದ 'ಅಂದರ್ ಬಾಹರ್' ಚಿತ್ರದ ಬಗ್ಗೆ ಅಭಿಮಾನಿಗಳದು ದೊಡ್ಡ ನಿರೀಕ್ಷೆ. ಈ ಬಹು ನಿರೀಕ್ಷಿತ ಸಿನಿಮಾ, ಸೆನ್ಸಾರ್ ಪರೀಕ್ಷೆಯಲ್ಲಿ 'ಯು/ಎ' ಪ್ರಮಾಣಪತ್ರ ಪಡೆದಿದ್ದು, ಏಪ್ರಿಲ್ 5ರಂದು ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆ ಕಾಣಲಿದೆ.

'ಅಂದರ್ ಬಾಹರ್' ಆರು ಮಂದಿ ನಿರ್ಮಾಪಕರು ಸೇರಿಕೊಂಡು ನಿರ್ಮಿಸಿರುವ ಸಿನಿಮಾ. ಶೀರ್ಷಿಕೆಗೆ ತಕ್ಕಂತೆ ಅವರದೂ ಜುಗಾರಿ ಆಟವೇ. ವಿಭಿನ್ನ ಕಲಾವಿದರು, ತಂತ್ರಜ್ಞರನ್ನು ಒಟ್ಟಿಗೆ ಸೇರಿಸಿ ರೂಪಿಸಿರುವ ಸಿನಿಮಾ ಇದು. ಚಿತ್ರದ ನಿರ್ದೇಶಕ ಫಣೀಶ್ ರಾಮನಾಥಪುರ ಅವರಿಗಿದು ಚೊಚ್ಚಲ ಅನುಭವ. ಆರಂಭದಲ್ಲೇ ಶಿವಣ್ಣನಂಥ ಹಿರಿಯ ಕಲಾವಿದನ ಸಿನಿಮಾ ನಿರ್ದೇಶಿಸಲು ಅವಕಾಶ ದೊರೆತದ್ದು ಫಣೀಶರಿಗೆ ಖುಷಿ ಮತ್ತು ಆತಂಕ ಎರಡನ್ನೂ ತಂದಿದೆ. ಅಭಿಮಾನಿಗಳ ನಿರೀಕ್ಷೆ ಹುಸಿಯಾಗದಂತೆ ಚಿತ್ರ ರೂಪಿಸಿರುವೆ ಎನ್ನುವ ಸಮಾಧಾನ ಅವರದು.

ವಿಜಯ್ ಪ್ರಕಾಶ್ ಅವರ ಸಂಗೀತ ಚಿತ್ರದ ಇನ್ನೊಂದು ವಿಶೇಷ. ಪೋಸ್ಟರ್‌ಗಳಲ್ಲಿ ಸಂಗೀತ ನಿರ್ದೇಶಕರ ಚಿತ್ರವನ್ನು ಎದ್ದು ಕಾಣುವಂತೆ ಬಳಸಿಕೊಳ್ಳಲಾಗಿದೆ. ಹಿರಿಯ ಕಲಾವಿದೆ ಅರುಂಧತಿ ನಾಗ್ ಚಿತ್ರದ ಇನ್ನೊಂದು ಆಕರ್ಷಣೆ. 'ಜೋಗಿ' ಚಿತ್ರದಲ್ಲಿ ಅರುಂಧತಿ ಮತ್ತು ಶಿವರಾಜ್ ಜೋಡಿ ಪ್ರೇಕ್ಷಕರನ್ನು ಮರುಳು ಮಾಡಿತ್ತು. ಆ ಮೋಡಿ 'ಅಂದರ್ ಬಾಹರ್'ನಲ್ಲೂ ಜರುಗಲಿದೆ ಎನ್ನುವುದು ಚಿತ್ರತಂಡದ ವಿಶ್ವಾಸ.

ಪಾರ್ವತಿ ಮೆನನ್ ಸಿನಿಮಾದ ನಾಯಕಿ. 'ಮಿಲನ' ಹಾಗೂ 'ಪೃಥ್ವಿ' ಚಿತ್ರಗಳಲ್ಲಿ ಪುನೀತ್‌ಗೆ ಜೋಡಿಯಾಗಿ ನಟಿಸಿದ್ದ ಈ ಮಲಯಾಳಿ ಚೆಲುವೆ ತಮ್ಮ ಅಭಿನಯ ಪ್ರತಿಭೆ ಮೂಲಕ ಸಹೃದಯರ ಗಮನ ಸೆಳೆದವರು. ಹೀಗೆ, ವಿಭಿನ್ನ ಕಾಂಬಿನೇಷನ್‌ನ 'ಅಂದರ್ ಬಾಹರ್'ನಲ್ಲಿ ಶಿವಣ್ಣ ಎಂದಿನಂತೆ ಹದಿ ಹರೆಯ ಆವಾಹಿಸಿಕೊಂಡು ನಟಿಸಿದ್ದಾರಂತೆ. ಎಂ.ಎಸ್. ರಮೇಶ್ ಅವರ ಮಸಾಲಾ ಮಾತುಗಳು ಚಿತ್ರದ ಮತ್ತೊಂದು ಹೈಲೈಟ್ ಎನ್ನಲಾಗಿದೆ.

---



# ಮಿಶ್ರಫಲ! ರೀಮೇಕ್ ಹಂಬಲ!

'ಚಾರ್ಮಿನಾರ್' ಚಿತ್ರ ತೆಲುಗಿಗೆ ರೀಮೇಕ್ ಆಗುತ್ತಿದೆ ಎಂದು ಆ ಚಿತ್ರದ ನಿರ್ದೇಶಕ ಆರ್. ಚಂದ್ರು ಪ್ರಕಟಿಸಿದ್ದು ಹಳೆಯ ಮಾತಾಯಿತು. ಈಗ 'ಮೈನಾ' ಚಿತ್ರದ ಸರದಿ. ನಾಗಶೇಖರ್ ನಿರ್ದೇಶನದ 'ಮೈನಾ' ತೆಲುಗಿಗೆ ರೀಮೇಕ್ ಆಗುತ್ತಿದೆ ಎನ್ನುವುದು ಸದ್ಯದ ಸುದ್ದಿ.

ತೆಲುಗಿನ ನಿರ್ಮಾಪಕ ಎಸ್.ಎಸ್. ರಾಜಶೇಖರ್ ರೀಮೇಕ್ 'ಮೈನಾ' ನಿರ್ಮಿಸುತ್ತಿದ್ದಾರಂತೆ. ನಿರ್ದೇಶಕರು ಯಾರು, ತಾರಾಗಣದಲ್ಲಿ ಯಾರಿದ್ದಾರೆ ಎನ್ನುವ ವಿಷಯವಿನ್ನೂ ಸ್ಪಷ್ಟವಾಗಿಲ್ಲ. ಕನ್ನಡದ 'ಮೈನಾ' ಐವತ್ತು ದಿನಗಳ ಹೊಸ್ತಿಲಲ್ಲಿ ನಿಂತಿರುವ ಸಂದರ್ಭದಲ್ಲಿ ಈ ರೀಮೇಕ್ ಸುದ್ದಿ ಹೊರಬಿದ್ದಿದೆ.

'ಮೈನಾ' ಚಿತ್ರಕ್ಕೆ ದೊಡ್ಡ ಯಶಸ್ಸೇನೂ ದೊರೆತಿಲ್ಲ. 'ಸಂಜು ವೆಡ್ಸ್ ಗೀತಾ'ದ ಯಶಸ್ಸಿನ ಹುಮ್ಮಸ್ಸಿನಲ್ಲಿ ನಾಗಶೇಖರ್ 'ಮೈನಾ' ರೂಪಿಸಿದ್ದರು. ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ ಸತ್ಯಕಥೆಯನ್ನು ಆಧರಿಸಿದ ಈ ಸಿನಿಮಾದಲ್ಲಿ, ಚೇತನ್ ಹಾಗೂ ನಿತ್ಯಾ ಮೆನನ್ ಮುಖ್ಯಪಾತ್ರಗಳಲ್ಲಿ ನಟಿಸಿದ್ದರು. ಸತ್ಯ ಹೆಗಡೆ ಅವರ ಛಾಯಾಗ್ರಹಣದಲ್ಲಿ ಚಿತ್ರಕ್ಕೊಂದು ವಿಶಿಷ್ಟ ಆವರಣ ಕೂಡ ಸೃಷ್ಟಿಯಾಗಿತ್ತು. ಆದರೆ, ಸಿನಿಮಾ ನೋಡಿದ ಪ್ರೇಕ್ಷಕರು 'ಸಂಜು ವೆಡ್ಸ್ ಗೀತಾ' ಚಿತ್ರದ ಛಾಯೆಯನ್ನೇ 'ಮೈನಾ'ದಲ್ಲೂ ಕಂಡಿದ್ದರು.

ತಮ್ಮ ಚಿತ್ರದ ಬಗ್ಗೆ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿದ್ದರೂ ನಾಗಶೇಖರ್ ಉತ್ಸಾಹಗುಂದಿಲ್ಲ. 'ಮೈನಾ' ಚಿತ್ರದ ಎರಡನೇ ಭಾಗವನ್ನು ಸಿನಿಮಾ ಮಾಡುವ ತಯಾರಿಯಲ್ಲಿ ಅವರು ತೊಡಗಿಕೊಂಡಿದ್ದಾರೆ.

■ ರಘು